# ಜಿಂಕೆಯ ತ್ಯಾಗ

ಒಂದು ದಟ್ಟ ಅಡವಿ. ಅಲ್ಲಿ ಎರಡು ಜಿಂಕೆಯ ಹಿಂಡುಗಳು ಇದ್ದವು. ಒಂದೊಂದು ಹಿಂಡಿನಲ್ಲಿಯೂ ಸುಮಾರು ಐನೂರು ಜಿಂಕೆಗಳಿದ್ದವು ಮತ್ತು ಅವುಗಳಿಗೆ ಒಬ್ಬೊಬ್ಬ ನಾಯಕನಿದ್ದ. ಒಂದು ಗುಂಪಿನ ನಾಯಕನು ಬುದ್ಧನ ಪೂರ್ವಜನ್ಮದವನಾಗಿದ್ದ, ಇನ್ನೊಂದರದು ದೇವದತ್ತನ ಪೂರ್ವಜನ್ಮ.

ಒಂದು ದಿನ ಕಾಶಿಯ ರಾಜ ಬ್ರಹ್ಮದತ್ತನು ತನ್ನ ಪರಿವಾರ ಸಮೇತ ಅದೇ ಕಾಡಿಗೆ ಬೇಟೆಗೆ ಹೋದನು. ಆನಂದದಿಂದ ಪ್ರಾಣಿಗಳನ್ನು ಬೇಟೆಯಾಡುತ್ತ ಮುಂದುವರಿಯುತ್ತಿದ್ದನು. ಅವನಿಗೆ ಈ ಎರಡೂ ಜಿಂಕೆಗಳ ಗುಂಪು ಕಾಣಿಸಿತು. ಅವು ಆರೋಗ್ಯವಂತವೂ ಸುಂದರವೂ ಆಗಿದ್ದವು. ಅವನು ಮತ್ತು ಪರಿವಾರದವರೆಲ್ಲ ಉತ್ಸಾಹದಿಂದ ಜಿಂಕೆಗಳ ಮೇಲೆ ಬಾಣಪ್ರಯೋಗ ಮಾಡತೊಡಗಿದರು.

ಜಿಂಕೆ-ಬುದ್ಧನಿಗೆ ಜಿಂಕೆಗಳ ಈ ಕಗ್ಗೊಲೆಯನ್ನು ನೋಡಿ ಸಹಿಸಲಾಗಲಿಲ್ಲ. ಅವನ ಹೃದಯ ಕರುಣೆಯಿಂದ ಮಿಡಿಯ ತೊಡಗಿತು. ಅವನು ರಾಜನ ಸಮೀಪ ಹೋಗಿ ಅವನೊಡನೆ ಮಾತನಾಡಿ ಯಾವುದಾದರೂ ಒಂದು ಒಪ್ಪಂದಕ್ಕೆ ಬರಬೇಕೆಂದು ತೀರ್ಮಾನಿಸಿದನು.

ಬಾಣಗಳ ಸುರಿಮಳೆ ಆಗುತ್ತಿದೆ. ಆದರೂ ಎದೆಗುಂದದೆ ಅವನು ರಾಜನನ್ನು ಭೇಟಿಯಾಗಲು ಮುಂದುವರಿದನು. ಒಂದು ಜಿಂಕೆ ಇಷ್ಟು ಧೈರ್ಯವಾಗಿ ಮುಂದೆ ಬರುತ್ತಿರುವುದನ್ನು ಕಂಡು ರಾಜನು ಬಾಣಬಿಡುವುದನ್ನು ನಿಲ್ಲಿಸಬೇಕೆಂದು ತನ್ನ ಪರಿವಾರದವರಿಗೆ ಆಜ್ಞಾಪಿಸಿದನು.

ಜಿಂಕೆ ರಾಜನ ಸಮೀಪ ಬಂದು ಹೇಳಿತು: "ರಾಜನ್ನೆ, ಈ ಮುಗ್ಧ ಜಿಂಕೆಗಳು ನಿನ್ನ ಬಾಣಗಳಿಗೆ ಆಹುತಿಯಾಗುತ್ತಿರುವುದನ್ನು ನೋಡಿ ನನಗೆ ಸಹಿಸಲಾಗುತ್ತಿಲ್ಲ. ನಿಮ್ಮ ಭೋಜನಕ್ಕೆ ಈ ಜಿಂಕೆಗಳು ಬೇಕಾದರೆ ನಿಮಗೆ ಪ್ರತಿದಿನವೂ ಒಂದೊಂದು ಜಿಂಕೆಯನ್ನು ಕಳಿಸುತ್ತೇವೆ—ಒಂದೊಂದು ದಿನ ಒಂದೊಂದು ಗುಂಪಿನಿಂದ ಕಳಿಸುತ್ತೇವೆ. ಈ ರೀತಿ ನಮ್ಮ ಸಮೂಹವನ್ನೇ ನಾಶಮಾಡುವುದು ಬೇಡ. ಇದಕ್ಕೆ ನಿನ್ನ ಒಪ್ಪಿಗೆಯೆ ಮಹಾರಾಜ?" ರಾಜನು ಒಪ್ಪಿಗೆ ಸೂಚಿಸಿ ಅರಮನೆಗೆ ಹಿಂದಿರುಗಿದನು.

ಒಪ್ಪಂದದ ಪ್ರಕಾರ ಪ್ರತಿದಿನ ಜಿಂಕೆಯನ್ನು ಕಳಿಸಿಕೊಡಲಾಗುತ್ತಿತ್ತು. ಒಂದು ದಿನ ದೇವದತ್ತನ ಗುಂಪಿಗೆ ಸೇರಿದ ಒಂದು ಹೆಣ್ಣು ಜಿಂಕೆಯ ಸರದಿ ಬಂತು. ಅದಕ್ಕೆ ಹೋಗಲು ಇಷ್ಟವಿರಲಿಲ್ಲ. ಕಾರಣ ತನ್ನ ಪ್ರಾಣದ ಮೇಲಿನ ಆಸೆಯಲ್ಲ, ಅದು ಗರ್ಭಿಣಿಯಾಗಿದ್ದುದರಿಂದ ತನ್ನ ಹೊಟ್ಟೆಯೊಳಗಿನ ಭ್ರೂಣಶಿಶು ನಾಶವಾಗುವುದಲ್ಲ ಎಂದು. ಅದು ಗುಂಪಿನ ನಾಯಕ ದೇವದತ್ತನ ಮುಂದೆ ತನ್ನ ಅಳಲನ್ನು ತೋಡಿಕೊಂಡಿತು. ಈಗ ತನ್ನ ಬದಲು ಬೇರೆ ಜಿಂಕೆಯನ್ನು ಕಳಿಸಿದರೆ ಮುಂದೊಂದು ಸಂದರ್ಭದಲ್ಲಿ ತಾನು ಹೋಗುವುದಾಗಿ ಅದು ಹೇಳಿತು.

ದೇವದತ್ತನು ನಿಷ್ಕರುಣಿ. ಅವನು ಕೋಪದಿಂದ ಹೇಳಿದ, "ಸಾಧ್ಯವಿಲ್ಲ, ನಿನಗಾಗಿ ಈಗ ಬೇರೆಯವರು ಪ್ರಾಣ ಕಳೆದುಕೊಳ್ಳಬೇಕೆ? ನಿನ್ನಂತೆಯೇ ಎಲ್ಲರಿಗೂ ಪ್ರಾಣದ ಮೇಲೆ ಆಸೆಯಿರುವುದಿಲ್ಲವೆ? ಈಗ ನಿನ್ನ ಸರದಿ. ಹೋಗು. ಮರುಮಾತೇ ಇಲ್ಲ."

ಈ ಕೋಪದ ನುಡಿಗಳನ್ನು ಕೇಳಿ ಹೆಣ್ಣುಜಿಂಕೆಗೆ ಇನ್ನಷ್ಟು ದುಃಖ ಜಾಸ್ತಿಯಾಯಿತು. ಇನ್ನೇನು ಮಾಡುವುದೆಂದು ಚಿಂತಿಸತೊಡಗಿತು. ಅದಕ್ಕೆ ಈಗ ಜಿಂಕೆ-ಬುದ್ಧನ ನೆನಪಾಯಿತು. ನೇರವಾಗಿ ಅವನ ಸಮೀಪ ಹೋಗಿ ತನ್ನ ದುಃಖವನ್ನು ತೋಡಿಕೊಂಡಿತು.

ಬುದ್ಧನ ಹೃದಯ ಕರಗಿತು. ಅವನು ಈಗ ಈ ಜಿಂಕೆಯ ಜೀವ ಉಳಿಸುವುದು ಹೇಗೆಂದು ಯೋಚಿಸತೊಡಗಿದ. ಈ ಹೆಣ್ಣು ಜಿಂಕೆಯನ್ನು ಕೊಂದರೆ ಅದರ ಹೊಟ್ಟೆಯೊಳಗಿನ ಮರಿಯೂ ಸಾಯುತ್ತದೆ. ಇದರ ಬದಲು ಬೇರೆ ಜಿಂಕೆಯನ್ನು ಕಳಿಸುವುದು ನ್ಯಾಯಸಮ್ಮತವಲ್ಲ. ಈಗ ಒಂದೇ ಉಪಾಯವೆಂದರೆ ಈ ಜಿಂಕೆಯ ಬದಲು ತಾನೇ ಪ್ರಾಣತ್ಯಾಗ ಮಾಡುವುದು.

ಜಿಂಕೆ-ಬುದ್ಧನು ರಾಜನ ಅರಮನೆಗೆ ಹೋದನು. "ನೀನೇಕೆ ಬಂದೆ ಇಂದು? ಜಿಂಕೆಗಳೆಲ್ಲ ನಾಶವಾದವೆ ಆಗಲೆ?" ಎಂದು ರಾಜನು ವಿಚಾರಿಸಿದನು. ಬುದ್ಧನು ಹೇಳಿದ: "ಮಹಾರಾಜ, ನಿನ್ನ ಔದಾರ್ಯ ಮತ್ತು ದಯೆ ಜಗತ್ತಿಗೇ ತಿಳಿದ ವಿಷಯ. ನಿನ್ನ ಶಾಸನವೂ ಅಷ್ಟೇ ನಿಷ್ಠುರವಾದುದು. ನಿನ್ನಾಣತಿಯನ್ನು ಯಾರೂ ಮೀರುವಂತಿಲ್ಲ. ಮೊದಲಿನ ವ್ಯವಸ್ಥೆಯಂತೆಯೇ ಜಿಂಕೆಗಳನ್ನು ಬಲಿಗೆ ಕಳಿಸಲಾಗುತ್ತಿದೆ. ಆದರೆ ನಮ್ಮ ವಂಶವೇ ನಾಶವಾಗುತ್ತಿರುವುದನ್ನು ನೋಡಿ ನನಗೆ ಸಹಿಸದಾಗಿದೆ. ಹೆಣ್ಣು ಜಿಂಕೆಗಳೆಲ್ಲ ನಾಶವಾದರೆ ಈ ವಂಶವೃದ್ಧಿ ಹೇಗಾದೀತು? ಗರ್ಭಿಣಿಯಾದ ಒಂದು ಹೆಣ್ಣುಜಿಂಕೆಯ ಜೀವ ಉಳಿಸಲು ಇಂದು ನಾನೇ ಬಲಿಪಶುವಾಗಲು ಬಂದಿದ್ದೇನೆ. ಇಂದು ಆಕೆಯ ಸರದಿಯಾಗಿತ್ತು. ಜೀವನ ಕ್ಷಣಿಕ, ಯಾವುದೂ ಶಾಶ್ವತವಲ್ಲ. ಬದುಕಿರುವಾಗಲೆ ಇತರರಿಗೆ ದಯೆ ತೋರುವುದರ ಮೂಲಕ ಜೀವನಸಾರ್ಥಕತೆಯನ್ನು ಪಡೆಯುವುದೊಳ್ಳೆಯದಲ್ಲವೇ?"

ಜಿಂಕೆ-ಬುದ್ಧನ ಈ ಮಾತು ಕೇಳಿ ರಾಜನ ಮನ ಕರಗಿತು, ನಾಚಿಕೆಯೂ ಆಯಿತು. ಆ ಜಿಂಕೆಯ ಮುಂದೆ ತಾನು ಅತ್ಯಲ್ಪನೆಂದು ಕಂಡಿತು ಅವನಿಗೆ. ಅತ್ಯಂತ ದೈನ್ಯದಿಂದ ಹೇಳಿದನು: "ಪಶುಜಾತಿಗೆ ಸೇರಿದವನು ನೀನಲ್ಲ, ನಾನು. ನಾನು ಮನುಷ್ಯರೂಪದಲ್ಲಿರುವ ಜಿಂಕೆ. ನೀನು ಪ್ರಾಣಿಯಂತೆ ತೋರಿದರೂ ಮಾನವಸಹಜ ಹೃದಯ ನಿನ್ನಲ್ಲಿದೆ. ನೀನು ನನ್ನ ಕಣ್ಣನ್ನು ತೆರೆಯಿಸಿದೆ. ಈಗಲೇ ನಾನು ಪ್ರತಿಜ್ಞೆ ಮಾಡುತ್ತೇನೆ: ಇನ್ನೆಂದೂ ನಾನು ಮಾಂಸಾಹಾರ ಸ್ವೀಕರಿಸುವುದಿಲ್ಲ. ನೀವೆಲ್ಲ ನಿರ್ಭೀತಿಯಿಂದಿರಿ. ಇನ್ನೆಂದೂ ನಿಮ್ಮ ಪ್ರಾಣಕ್ಕೆ ಭಯವಿಲ್ಲ."

ಆ ಅರಣ್ಯವನ್ನು ಜಿಂಕೆಗಳು ಮುಕ್ತವಾಗಿ ವಿಹರಿಸಲು ಕಾದಿರಿಸಲಾಯಿತು. ಅಂದಿನಿಂದ ಆ ಅರಣ್ಯಕ್ಕೆ 'ಹರಿಣೋದ್ಯಾನ'ವೆಂದು ಹೆಸರಾಯಿತು.

(ಸಾಧಾರ)